BMRDA Approval (4)

ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote-pa.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಸಿ.ಸಿ./77/2018-19 ದಿನಾಂಕ: 23.05.2019

## ಪ್ರಾರಂಭಿಕ ಪ್ರಮಾಣ ಪತ್ರ

ವಿಷಯ : ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ದಂಡುಪಾಳ್ಯ ಗ್ರಾಮದ ಸ.ನಂ. 129/2 ರಲ್ಲಿನ 02 ಎಕರೆ 19 ಗುಂಟೆ ವಿಸ್ತೀರ್ಣದ ಜಮೀನಿಗೆ ಅನುಮೋದನೆಯಾದ ವಸತಿ ಅಭಿವೃದ್ಧಿ ಯೋಜನೆ ನಕ್ಷೆಯಲ್ಲಿನ ನಿವೇಶನದಲ್ಲಿನ ನಗರಸಭೆ, ಹೊಸಕೋಟೆ ವ್ಯಾಪ್ತಿಯ ದಂಡುಪಾಳ್ಯ ಗ್ರಾಮದ ಖಾತಾ ಸಂಖ್ಯೆ: 14568/129/2 ರಲ್ಲಿ ಕಟ್ಟಡ ನಕ್ಷೆಗೆ (ವಸತಿ ಸಮುಚ್ಚಯ) ಅನುಮೋದನೆ ಕೋರಿರುವ ಬಗ್ಗೆ ಅನುಮೋದನೆ ನೀಡುವ ಕುರಿತು.

ಉಲ್ಲೇಖ: 1. ಈ ಕಛೇರಿಯ ಮಂಜೂರಾತಿ ಆದೇಶ ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ./32/2014-15, ದಿನಾಂಕ: 17.04.2018.

2. ಪೌರಾಯುಕ್ತರು, ನಗರಸಭೆ, ಹೊಸಕೊಟೆ ಇವರ ಪತ್ರ ಸಂಖ್ಯೆ: ನ.ಹೊ/ಎಂ.ಯು.ಎನ್(4)/ ಕ.ಶಾ/ ಸಿ.ಆರ್/40/2018-19, ದಿನಾಂಕ: 19.03.2019.

3. ಅರ್ಜಿದಾರರು ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿದ ಕುರಿತು ಮನವಿ ದಿನಾಂಕ: 28.03.2019 ರೊಂದಿಗೆ Syndicate Bank, Hoksote-562 114 ರಲ್ಲಿನ ಡಿ.ಡಿ.ನಂ. 304721, ದಿನಾಂಕ: 28.03.2019, ರೂ. 16,22,000/-.

ಪ್ರಸ್ತಾವನೆ

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಈ ಕಛೇರಿ ಮಂಜೂರಾತಿ ಆದೇಶದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ದಂಡುಪಾಳ್ಯ ಗ್ರಾಮದ ಸ.ನಂ. 129/2 ರಲ್ಲಿನ 02 ಎಕರೆ 19 ಗುಂಟೆ ವಿಸ್ತೀರ್ಣದ ಜಮೀನಿಗೆ ವಸತಿ ಅಭಿವೃದ್ಧಿ ಯೋಜನೆ ನಕ್ಷೆಗೆ ಅನುಮೋದನೆ ನೀಡಲಾಗಿದೆ. ಉಲ್ಲೇಖ (2) ರಲ್ಲಿ ಅನುಮೋದಿತ ವಸತಿ ಅಭಿವೃದ್ಧಿ ಯೋಜನೆಯಲ್ಲಿ ವಸತಿ ಉಪಯೋಗದ ಬಹುಮಹಡಿ ಕಟ್ಟಡಕ್ಕೆ ಬೇಸ್‌ಮೆಂಟ್ + ನೆಲ ಮತ್ತು 07 ಮೇಲು ಅಂತಸ್ತುಗಳ (Basement+ G+07 Floors) ಒಟ್ಟು 197 ವಸತಿ ಘಟಕಗಳನ್ನು ಕಟ್ಟಲು ನಗರಸಭೆ, ಹೊಸಕೋಟೆ ವ್ಯಾಪ್ತಿಯ ದಂಡುಪಾಳ್ಯ ಗ್ರಾಮದ ಖಾತಾ ಸಂಖ್ಯೆ: 14568/129/2ರಲ್ಲಿ ಕಟ್ಟಡ ನಕ್ಷೆಗೆ ಅನುಮೋದನೆ ಕೋರಿ ನಕ್ಷೆಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಉಲ್ಲೇಖ (3) ರಂತೆ ಸಂಬಂಧಿಸಿದ ಶುಲ್ಕವನ್ನು ಅರ್ಜಿದಾರರು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ.

ಸದರಿ ನಿವೇಶನಕ್ಕೆ ಹಾಲಿ 33.6 ಮೀ. ಅಗಲದ ಹೊಸಕೋಟೆಯಿಂದ ಚಿಂತಾಮಣಿಗೆ ಹೋಗುವ ರಾಜ್ಯ ಹೆದ್ದಾರಿ ಸಂಖ್ಯೆ: 35 ರ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಸದರಿ ರಸ್ತೆಯನ್ನು 45 ಮೀ. ಗೆ ಅಗಲೀಕರಿಸಲು ಕಾಯ್ದಿರಿಸಲಾಗಿದೆ. ಸಲ್ಲಿಸಲಾದ ಕಟ್ಟಡ ನಕ್ಷೆಗಳು ಅನುಮೋದಿತ ವಲಯ ನಿಯಮಾವಳಿಗಳಿಗೆ ಅನುಗುಣವಾಗಿರುತ್ತದೆ.

ಆದ್ದರಿಂದ, ಮೇಲೆ ವಿವರಿಸಿರುವ ಅಂಶಗಳ ಮೇರೆಗೆ ವಸತಿ ಕಟ್ಟಡ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡುವ ಸಂಬಂಧ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.



Scanned by CamScanner

ಆದೇಶ ಸಂಖ್ಯೆ: ಹೊಯೋಪ್ರಾ/ಸಿ.ಸಿ./77/2018–19, ದಿನಾಂಕ : 23.05.2019

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ದಂಡುಪಾಳ್ಯ ಗ್ರಾಮದ ಸ.ನಂ. 129/2 ರಲ್ಲಿನ 02 ಎಕರೆ 19 ಗುಂಟೆ ವಿಸ್ತೀರ್ಣದ ಜಮೀನಿಗೆ ಅನುಮೋದನೆಯಾದ ವಸತಿ ಅಭಿವೃದ್ಧಿ ಯೋಜನೆ ನಕ್ಷೆಯಲ್ಲಿನ ನಿವೇಶನದಲ್ಲಿನ ನಗರಸಭೆ, ಹೊಸಕೋಟೆ ವ್ಯಾಪ್ತಿಯ ದಂಡುಪಾಳ್ಯ ಗ್ರಾಮದ ಖಾತಾ ಸಂಖ್ಯೆ: 14568/129/2 ರಲ್ಲಿ ಕಟ್ಟಡ ನಕ್ಷೆಗೆ (ವಸತಿ ಸಮುಚ್ಚಯ) ರಲ್ಲಿ ಬೇಸ್‌ಮೆಂಟ್ + ನೆಲ ಮತ್ತು 07 ಮೇಲು ಅಂತಸ್ತುಗಳ (Basement+ G+07 Floors) ಒಟ್ಟು 197 ವಸತಿ ಘಟಕಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 15 ರನ್ವಯ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಕಾರ್ಯರೂಪಕ್ಕೆ ತರಲು ತಾಂತ್ರಿಕ ಅನುಮೋದನೆ ನೀಡಲಾಗಿದೆ.

ಷರತ್ತುಗಳು:

1. ಅನುಮೋದಿತ ವಸತಿ ಅಭಿವೃದ್ಧಿ ಯೋಜನೆಯಲ್ಲಿ ಪ್ರಸ್ತಾವಿಸಲಾದ ಕಟ್ಟಡ ನಕ್ಷೆಗೆ ಅನುಗುಣವಾಗಿ ಹಾಗೂ ಈ ಪ್ರಾಧಿಕಾರದಿಂದ ನೀಡಲಾದ ಅನುಮೋದನೆಯಂತೆ ಕಟ್ಟಡವನ್ನು ನಿರ್ಮಿಸತಕ್ಕದ್ದು. ಈ ಅನುಮತಿಯು ದಿನಾಂಕ: 23.05.2019 ರಿಂದ ದಿನಾಂಕ: 22.05.2021 ರವರೆಗೆ ಚಾಲ್ತಿಯಲ್ಲಿದ್ದು ಈ ಅವಧಿಯಲ್ಲಿ ಕಟ್ಟಡ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು. ತಪ್ಪಿದಲ್ಲಿ ನವೀಕರಣಗೊಳಿಸತಕ್ಕದ್ದು. ಹಾಗೂ ಕಟ್ಟಡ ಕಾಮಗಾರಿ ಪೂರ್ಣಗೊಂಡ ನಂತರ ಈ ಕಛೇರಿಗೆ ಮಾಹಿತಿ ನೀಡತಕ್ಕದ್ದು.
2. ಸದರಿ ಜಮೀನಿನಲ್ಲಿ ಪ್ರಸ್ತಾಪಿಸಿರುವ ಕಟ್ಟಡಗಳ ನಿರ್ಮಾಣ ಸಂಬಂಧ ಸಲ್ಲಿಸಿರುವ ಮೆ|| ಬ್ಲೆಂಡ್ಸ್ ಡಿಸೈನ್ ಪ್ರೈ ಲಿ., ಬೆಂಗಳೂರು ರವರ ಸ್ಥಿರತೆ ಪ್ರಮಾಣ ಪತ್ರ (Structural Stability Certificate) ದಲ್ಲಿ ತಿಳಿಸಿರುವಂತೆ ಅವರ ಮೇಲ್ವಿಚಾರಣೆಯಲ್ಲಿ ಹಾಗೂ ನಿಯಮಗಳಂತೆ ಕಟ್ಟಡಗಳನ್ನು ನಿರ್ಮಿಸತಕ್ಕದ್ದು ಹಾಗೂ ಸದರಿ ಕಟ್ಟಡದ ಗುಣಮಟ್ಟಕ್ಕೆ ಅರ್ಜಿದಾರರು/ಅಭಿವೃದ್ಧಿದಾರರೇ ಹೊಣೆಗಾರರಾಗಿರುತ್ತಾರೆ.
3. ನಿವೇಶನದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಾದ ನಗರಸಭೆ, ಹೊಸಕೋಟೆ ವತಿಯಿಂದ ಪರವಾನಗಿ ಪಡೆಯತಕ್ಕದ್ದು.
4. ಸದರಿ ನಿವೇಶನದಲ್ಲಿ ವಸತಿ ಕಟ್ಟಡ ಕಾಮಗಾರಿ ಕೈಗೊಳ್ಳುವ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರ **PCB /69/CNP/171-H-214**, ದಿನಾಂಕ: 23.02.2017 ರನ್ವಯ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು.
5. ಸದರಿ ಜಮೀನಿನಲ್ಲಿ ಯಾವುದೇ ಕಾಮಗಾರಿ ಕೈಗೊಳ್ಳುವ ಮೊದಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ರವರ ಪತ್ರ ಸಂಖ್ಯೆ: EEE/HKTD/AEE(O)/AE-1/17-18/282, HD Reg No. 125518, ದಿನಾಂಕ: 22.04.2017 ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕದ್ದು.
6. ಸದರಿ ಜಮೀನಿನಲ್ಲಿ ಯಾವುದೇ ಕಾಮಗಾರಿ ಕೈಗೊಳ್ಳುವ ಮೊದಲು ಭಾರತೀಯ ವಿಮಾನಯಾನ ಪ್ರಾಧಿಕಾರ, ಚೆನ್ನೈ ರವರ ಪತ್ರ ಸಂಖ್ಯೆ: BIAL/SOUTH/B/031617/201450, ದಿನಾಂಕ: 16.03.2017 ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕದ್ದು.
7. Director General of Police & Director General, Karnataka Fire & Emergency Services, ಬೆಂಗಳೂರು ರವರ ನಿರಾಕ್ಷೇಪಣಾ ಪತ್ರ ಸಂಖ್ಯೆ: GBC(1)/73/2017, Docket No: KSFES/NOC/85/2017, ದಿನಾಂಕ: 08.06.2017 ರಲ್ಲಿ ವಿಧಿಸಲಾದ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು. ಅಲ್ಲದೇ, ಈಗ ಅನುಮೋದಿಸಿರುವ ಕಟ್ಟಡ ನಕ್ಷೆಯಂತೆ ನಿರಾಕ್ಷೇಪಣಾ ಪತ್ರವನ್ನು ಪರಿಷ್ಕರಿಸಿಕೊಂಡು, ಸದರಿ ನಿರಾಕ್ಷೇಪಣಾ ಪತ್ರವನ್ನು ಈ ಕಛೇರಿಯ ಮಾಹಿತಿಗೆ ಸಲ್ಲಿಸುವ ನಿಬಂಧನೆಗೊಳಪಟ್ಟಿದೆ.
8. ಭಾರತ ಸರ್ಕಾರದ MOEF ರವರ State Level Environment Impact Assessment Authority-Karnataka ರವರ ನಿರಾಕ್ಷೇಪಣಾ ಪತ್ರ ಸಂಖ್ಯೆ: SEIAA 49 CON 2017, ದಿನಾಂಕ: 28.04.2017 ರಲ್ಲಿ ವಿಧಿಸಲಾದ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು.



Scanned by CamScanner

ದೂರವಾಣಿ / ಫ್ಯಾಕ್ಸ್ : 080-2793 4470
080-2793 5412
URL : www.hoskote-pa.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಸಿ.ಸಿ./77/2018-19　　　　　　ದಿನಾಂಕ: 23.05.2019

9. ಪ್ರಸ್ತಾಪಿತ ಯೋಜನೆಗೆ ಕುಡಿಯುವ ನೀರು ಪೂರೈಕೆ ಬಗ್ಗೆ ಪೌರಾಯುಕ್ತರು, ನಗರಸಭೆ, ಹೊಸಕೋಟೆ ರವರ ಪತ್ರ ಸಂ: ನ.ಹೊ/ಸಿ.ಆರ/26/2018-19, ದಿನಾಂಕ: 29.03.2019 ರಂದು ನೀಡಿರುವ ಪತ್ರದಂತೆ ಅಗತ್ಯ ಕ್ರಮ ಜರುಗಿಸಿ ನೀರು ಪೂರೈಕೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳುವುದು ಹಾಗೂ ಇತರೆ ಮೂಲಗಳಿಂದಲೂ ನೀರು ಪೂರೈಕೆಗೆ ಕ್ರಮ ಜರುಗಿಸುವುದು. ಸದರಿ ಸ್ಥಳೀಯ ಸಂಸ್ಥೆಯಿಂದ ಪ್ರಸ್ತಾಪಿತ ವಸತಿ ಕಟ್ಟಡಕ್ಕೆ ನೀರನ್ನು ಒದಗಿಸದೇ ಇದ್ದಲ್ಲಿ, ಈ ಬಗ್ಗೆ ಅಭಿವೃದ್ಧಿದಾರರು / ಜಮೀನಿನ ಮಾಲೀಕರು ತಮ್ಮ ಸ್ವಂತ ಖರ್ಚಿನಲ್ಲಿ ಕುಡಿಯುವ ನೀರು ಪೂರೈಕೆಗೆ ಅಗತ್ಯ ಕ್ರಮವನ್ನು ಕೈಗೊಳ್ಳುವ ನಿಬಂಧನೆಗೆ ಒಳಪಟ್ಟಿರುತ್ತದೆ.
10. ಇತರೇ ಇಲಾಖೆಗಳಿಂದ ಪಡೆದಿರುವ ನಿರಾಕ್ಷೇಪಣಾ ಪತ್ರಗಳಲ್ಲಿನ ನಿಬಂಧನೆ/ಷರತ್ತು ಹಾಗೂ ಇತರೇ ಅಂಶಗಳನ್ನು ತಪ್ಪದೇ ಪಾಲಿಸತಕ್ಕದ್ದು.
11. ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ಕಟ್ಟಡ ನಕ್ಷೆಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
12. ಈ ನಿವೇಶನದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಹಾಗೂ ಹೊಸ ಸಸ್ಯಗಳನ್ನು ಬೆಳೆಸುವುದು.
13. ಸೋಲಾರ್ ವಾಟರ್ ಹೀಟರ್ ಅನ್ನು ಕಟ್ಟಡಗಳಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.
14. ಸದರಿ ನಿವೇಶನದಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
15. ಕಟ್ಟಡದ ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರನ್ನು ಬಳಸುವುದನ್ನು ನಿಷೇಧಿಸಲಾಗಿದೆ ಹಾಗೂ ಕಾರ್ಮಿಕ ಇಲಾಖೆಯ ಆದೇಶಾನುಸಾರ ವಿಧಿಸಿರುವ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು. ಮತ್ತು ಕಟ್ಟಡ ಕಾಮಗಾರಿ ಕಾರ್ಮಿಕರಿಗೆ ಕಟ್ಟಡ ಕಾಮಗಾರಿಯ ಸಂದರ್ಭದಲ್ಲಿ ಅಗತ್ಯ ಸೌಕರ್ಯಗಳನ್ನು ಒದಗಿಸತಕ್ಕದ್ದು.
16. ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಶೇಖರಣೆ ಮಾಡಬಾರದು.
17. ಕಟ್ಟಡ ನಡು ಜಾಗ ಪ್ರದೇಶದ ಅಂಚಿನಲ್ಲಿ ಗಿಡ ಮರಗಳನ್ನು ಬೆಳೆಸತಕ್ಕದ್ದು.
18. ಒಂದು ಅನುಮೋದಿತ ಕಟ್ಟಡ ನಕ್ಷೆಯನ್ನು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಧಿಕಾರಿಗಳ ಸಮೀಕ್ಷೆಗಾಗಿ ಪ್ರದರ್ಶಿಸತಕ್ಕದ್ದು.
19. ಸದರಿ ಪ್ರಸ್ತಾಪಿತ ಜಮೀನಿನಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರ/ಇತರೆ ಸರ್ಕಾರಿ ಇಲಾಖೆಗಳ ಜಮೀನುಗಳು/ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಹಾಗೂ ಖರಾಬು ಜಮೀನುಗಳ ಅಳತೆಗಳು ಮತ್ತು ಅವುಗಳ ವಾಸ್ತವಿಕ ಸ್ಥಳಗಳ ವ್ಯತ್ಯಾಸ ಕಂಡುಬಂದಂತಹ ಸಂದರ್ಭದಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರವು ಅನುಮೋದಿತ ವಸತಿ ಉದ್ದೇಶದ ಏಕ ನಿವೇಶನ ನಕ್ಷೆಯನ್ನು/ಕಟ್ಟಡ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಸಂಪೂರ್ಣ ಅಧಿಕಾರ ಹೊಂದಿರುತ್ತದೆ.
20. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.
21. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
22. ಸದರಿ ಕಟ್ಟಡದಲ್ಲಿ ವಿಕಲಚೇತನ ಸ್ನೇಹಿ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದು.
23. ನೈಸರ್ಗಿಕವಾಗಿ ಹರಿಯುವ ನದಿ/ ಹಳ್ಳ /ಕೆರೆ ಮುಂತಾದವುಗಳಿಗೆ ಯಾವುದೇ ಮಲಿನ ನೀರನ್ನು ಬಿಡಬಾರದು.
24. ಶೌಚಕ್ಕೆ ಬಳಸುವ ತ್ಯಾಜ್ಯ ನೀರನ್ನು "ನಗರ ಮರುಬಳಕೆ ಮಾನದಂಡ" ದಂತೆ ಬಳಸುವುದು.
25. ಸಂಸ್ಕರಿತ ತ್ಯಾಜ್ಯ ನೀರನ್ನು ನಿವೇಶನದಲ್ಲಿನ ಉದ್ಯಾನವನ ಮತ್ತು ಶೌಚಕ್ಕೆ ಬಳಸುವುದು.



Scanned by CamScanner

26. ಎಸ್.ಟಿ.ಪಿ. ಯಲ್ಲಿ ವಾಸನೆ ನಿಯಂತ್ರಿಸುವ ವ್ಯವಸ್ಥೆಯನ್ನು ಅಳವಡಿಸುವುದು.
27. ಕಟ್ಟಡ ಕಾರ್ಮಿಕರು ಆದಷ್ಟು ಕಡಿಮೆ ಹೊಗೆ ಹೊರಸೂಸುವ ಉತ್ತಮ ತಾಂತ್ರಿಕತೆಯನ್ನು ಬಳಸುವುದು.
28. ಸರ್ಕಾರದ ನಿರ್ದೇಶನದ ಮೇರೆಗೆ ಇನ್ನಾವುದೇ ಶುಲ್ಕಗಳನ್ನು ತುಂಬಲು ಪ್ರಾಧಿಕಾರವು ಸೂಚನೆ ನೀಡಿದಲ್ಲಿ ಅರ್ಜಿದಾರರು ಅಂತಹ ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು.
29. ಈ ಅನುಮೋದಿತ ವಸತಿ ಕಟ್ಟಡ ನಕ್ಷೆಯನ್ನು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು (ರೇರಾ) ರವರಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, (ರೇರಾ), ಕರ್ನಾಟಕ ರವರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
30. ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ವಿಧಿ 15 ರಂತೆ ಕ್ರಮ ಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.
31. ಪ್ರಾಧಿಕಾರವು ವಿಧಿಸುವ ಇನ್ನಾವುದೇ ಷರತ್ತುಗಳಿಗೆ ಬದ್ಧವಾಗಿರತಕ್ಕದ್ದು.
32. ಮೇಲ್ಕಂಡ ಯಾವುದೇ ಷರತ್ತುಗಳನ್ನು ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.
33. ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ವಯ ಈ ಅನುಮತಿಯನ್ನು ನೀಡಲಾಗಿದ್ದು, ವಸತಿ ಕಟ್ಟಡ ನಕ್ಷೆಗೆ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಸತಿ ಕಟ್ಟಡ ನಕ್ಷೆಗೆ ನೀಡಿರುವ ಅಂಗೀಕಾರ ತಾನಾಗಿಯೇ ರದ್ದುಗೊಳ್ಳುತ್ತದೆ.

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.

23/05/2019

<u>ಪ್ರತಿಯನ್ನು :</u>

1. ಪೌರಾಯುಕ್ತರು,
ನಗರಸಭೆ, ಹೊಸಕೋಟೆ — ಇವರಿಗೆ ಕಟ್ಟಡ ನಕ್ಷೆಯ ನಾಲ್ಕು ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

2. ಶ್ರೀ ಕುಮಾರಸ್ವಾಮಿ ರವರ ಜಿಪಿಎದಾರರಾದ ಮೆ॥ ಎಸ್.ಎಲ್.ವಿ. ಬಿಲ್ಡರ್ಸ್ ಅಂಡ್ ಡೆವಲಪರ್ಸ್ ರವರ ಪರವಾಗಿ ಶ್ರೀ ಸುರೇಶ್ ನಾಯ್ಡು ಬಿನ್ ಲೇ. ಶ್ರೀ ರಾಮಕೃಷ್ಣಪ್ಪ ಮತ್ತು ರಾಜ್ ಕುಮಾರ್ ಬಿನ್ ಶ್ರೀ ಎ. ರಾಮಪ್ಪ ನಾಯ್ಡು,# 45, 1ನೇ ಮಹಡಿ, ಬೈರತಿ ಗ್ರಾಮ, ವಾಟರ್ ಟ್ಯಾಂಕ್ ಹತ್ತಿರ, ಕೊತ್ತನೂರು ಅಂಚೆ, ಬೈರತಿಯಿಂದ ಹೊಸಕೋಟೆ ಮುಖ್ಯ ರಸ್ತೆ, ಬೆಂಗಳೂರು–560 077 ರವರ ಮಾಹಿತಿಗಾಗಿ ಕಳುಹಿಸಿದೆ.



Scanned by CamScanner